ಓ.ಎಸ್. ನಂಃ 92/2022
ಡ್ರಿ.ಡಬ್ಲ್ಯ-3 ( ಶೋಭಾ )

**ಪಾಟೀಸವಾಲುಃ ಶ್ರೀ.ಬಿ ಹೆಚ್ ಎನ್ ವಾದಿ ಪರ ವಕೀಲರಿಂದಃ**

1. ನಾನು 2ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ ನನಗೆ ಸಹಿ ಮಾಡಲು ಮಾತ್ರ ಬರುತ್ತದೆ. ನನ್ನ ತವರೂರು ಚಿಕೊಪ್ಪ. ನನಗೆ ಚಿಕ್ಕೋಡಿ ತಾಲೂಕಿನ ಮಾಂಜರಿ ಗ್ರಾಮಕ್ಕೆ ಕೊಟ್ಟಿರುತ್ತಾರೆ. ನನಗೆ 3 ಜನ ಮಕ್ಕಳಿರುತ್ತಾರೆ. ನಾನು ಖಾಯಂ ಮಾಂಜರಿಯಲ್ಲಿಯೇ ವಾಸ ಇದ್ದೇನೆ ಎಂದರೆ ಸರಿ. ಗೀತಾ ಇವರು ಈ ದಾವೆಯನ್ನು ನನ್ನ ಅಣ್ಣ , ತಮ್ಮ, ಚಿಕ್ಕಮ್ಮ ಇವರ ಮೇಲೆ ಮಾಡಿರುತ್ತಾರೆ. ದಾವಾ ಜಮೀನುಗಳು ಲೋಳಸೂರ ಗ್ರಾಮದಲ್ಲಿವೆ ನನಗೆ ಅವುಗಳ ಸರ್ವೆ ನಂಬರ ಹಾಗೂ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳಿಗೆ ನಾನು ಎಂದು ಹೋಗಿಲ್ಲ. ಜಮೀನುಗಳ್ಳಲದೆ ಖುಲ್ಲಾ ಜಾಗಾ ಮನೆಯ ಮೇಲೆಯೂ ಸಹ ದಾವೆ ಮಾಡಿರುತ್ತಾರೆ.

2. ಮೊದಲು ದಾವಾ ಜಮೀನುಗಳು ನನ್ನ ಅಜ್ಜ ತುಳಜಪ್ಪ ಹುಣಶ್ಯಾಳ ಹೆಸರಿನಲ್ಲಿದ್ದವು . ದಾವಾ ಜಮೀನುಗಳು ನನ್ನ ಅಜ್ಜ ನಹೆಸರಿನಲ್ಲಿ ಇವೆ ಎಂದು ನಾನು ದಾಖಲೆ ತೆಗೆಯಿಸಿ ನೋಡಿಲ್ಲ. ನನ್ನ ಅಜ್ಜ ತುಳಜಪ್ಪ ತೀರಿಕೊಳ್ಳುವವರೆಗೂ ದಾವಾ ಜಮೀನುಗಳು ನನ್ನ ಅಜ್ಜನ ಹೆಸರಿನಲ್ಲಿ ಇದ್ದವು. ಭಾಗವ್ವ ನನ್ನ ತಾಯಿ ದುಂಡವ್ವ ನನ್ನ ಚಿಕ್ಕಮ್ಮ . ನನ್ನ ತಾಯಿ ತಮ್ಮ ಜೀವಿ ಕಾಲಾವಧಿಯಲ್ಲಿ ಮತ್ತು ಅವರ ಮರಣ ನಂತರ ಪ್ರತಿವಾದಿ 6 ರಿಂದ 8 ಹಾಗೂ

ನನ್ನ ಚಿಕ್ಕಮ್ಮ 5 ನೇ ಪ್ರತಿವಾದಿ ಇವತ್ತಿನವರೆಗೂ ದಾವಾ ಆಸ್ತಿಗಳಲ್ಲಿ ಪಾಲು ಕೇಳಿಲ್ಲ ಎಂದರೆ ಸರಿ .

3. ಮೃತ ಬಾಳಪ್ಪ ಇವರಿಗೆ ಮಹಾದೇವಿ ಇವರ ಮೊದಲ ಹೆಂಡತಿ ಎಂದರೆ ಸರಿ . ಸದರಿಯರಿಗೆ ವಾದಿ ಮತ್ತು 4 ನೇ ಪ್ರ2ವಾದಿ ಇವರ ಮಕ್ಕಳು ಎಂದರೆ ಸರಿ . ಪ್ರತಿವಾದಿ 1 ಮತ್ತು ಬಾಳಪ್ಪ ರವರಿಗೆ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ಬಾಳಪ್ಪ ಮತ್ತು 1 ನೇ ಪ್ರತಿವಾದಿಯ ಮದುವೆ ಎಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ ಹಾಗೂ ನಾನು ತಿಳಿದುಕೊಂಡಿಲ್ಲ. ಇವತ್ತಿನವರೆಗೂ ಬಾಳಪ್ಪ ಮತ್ತು ಉದ್ದವ್ವ ರ ನಡುವೆ ಮದುವೆಯಾದ ಬಗ್ಗೆ ತಿಳಿದುಕೊಂಡಿಲ್ಲ. ಬಾಳಪ್ಪ ಮತ್ತು 1ನೇ ಪ್ರತಿವಾದಿ ಮದುವೆಯಾದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

4. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಹುಣಶ್ಯಾಳ ಗ್ರಾಮದಲ್ಲಿ ದಾವಾ ಆಸ್ತಿ ಮನೆ ನಂಬರ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಹಾಗೂ ಅವರಿಗೆ ಎಷ್ಟು ಸಂಬಳ ಬರುತ್ತದೆ ಎಂದು ನಾನು ದಾಖಲೆಗಳನ್ನು ನೋಡಿಲ್ಲ. ನಾನು ಇಂದು ನ್ಯಾಯಾಲಯಕ್ಕೆ ಮಾಂಜರಿಯಿಂದ ಬಂದಿರುತ್ತೇನೆ. ನನಗೆ ಸಾಕ್ಷಿ ನುಡಿಯಲು 3ನೇ ಪ್ರತಿವಾದಿ ಕರೆದಿದ್ದರು ಎಂದರೆ ಸರಿ . 3 ನೇ ಪ್ರತಿವಾದಿ ದಾವಾ ಮನೆ ಆಸ್ತಿಯನ್ನು ತಾವು ಸ್ವಂತ ಗಳಿಸಿದ ಆಸ್ತಿ ಎಂದು ನನಗೆ ಹೇಳಿದ್ದರಿಂದ ಆ ಪ್ರಕಾರ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ದಾವಾ ಮನೆ ಆಸ್ತಿಯನುನ ಯಾ ವರ್ಷದಲ್ಲಿ ಮತ್ತು ಎಷ್ಟು ಮೊತ್ತಕ್ಕೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಲ್ಲಿ 3 ನೇ ಪ್ರತಿವಾದಿ ದಾವಾ ಮನೆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಜಮೀನುಗಳು ತುಳಜಪ್ಪ ರವರ ಮರಣ ನಂತರ ಬಾಳಪ್ಪ ಇವರ ಹೆಸರಿಗೆ ಆಗಿರುತ್ತವೆ ಎಂದರೆ ಸರಿ . ಬಾಳಪ್ಪ ಇವರ ಜೀವಿತ ಕಾಲದಲ್ಲಿ ದಾವಾ ಆಸ್ತಿಗಳನ್ನು ಯಾರಿಗೂ ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬಾಳಪ್ಪ ಇವರ ದಾವಾ ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಯಾವ ರೀತಿಯಾಗಿ ಬಿಟ್ಟುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 4,8 ಮತ್ತು 9 ನೇ ಖಂಡಿಕೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ಹಾಗೂ ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 3 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇತದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ನನಗೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಸನನ್ನ ತಾಯಿಯವರ ಜೀವಿತ ಕಾಲದಲ್ಲಿ ದಾವಾ ಆಸ್ತಿಗಳಲ್ಲಿಯ ತಮ್ಮ ಪಾಲಿನ ಬದಲಾಗಿ ಬಾಳಪ್ಪ ಇವರಿಂದ ದುಡ್ಡು ಬಂಗಾರ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಗೆ ಅನುಕೂಲವಾಗಲಿ ಎಯಿ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 92/2022
**ಡಿ.ಡಬ್ಲ್ಯು-3 ( ಶೋಭಾ )**

**ಮರು ವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ